




ಸ್ವಾಮಿ ಚೇತನಾನಂದರ "ಸ್ವಾಮಿ ಪ್ರೇಮಾನಂದೇರ್ ಜೀವನ್ ಓ ಸ್ಮೃತಿಕಥಾ" ಎಂಬ ಬಂಗಾಳಿ ಪುಸ್ತಕದಿಂದ ಕಥೆಗಳನ್ನು ಆಯ್ದು ಅನುವಾದ ಮಾಡಿಕೊಟ್ಟಿರುವವರು ಬೆಂಗಳೂರಿನ ಕುಮಾರಿ ಮೀನಾ.



## ಮಾರುತಿ ಕಲಿತ ಪಾಠ

ಅಯೋಧ್ಯೆಗೆ ಶ್ರೀರಾಮಚಂದ್ರ ರಾಜನಾದ. ಇದರ ನಿಮಿತ್ತ ದೊಡ್ಡ ಮಹೋತ್ಸವದ ಏರ್ಪಾಡಾಯಿತು. ಹನುಮಂತನೇ ಭಂಡಾರಿ. ಜನರು ಏನಾದರೂ ಪದಾರ್ಥ ಬೇಕು ಎಂದು ಕೇಳಿದಾಗ ಅಸಮಾಧಾನದಿಂದ ಬಹಳವಾಗಿ ಬೈಯುತ್ತಿದ್ದ. ಒಮ್ಮೆ ಇದ್ದಕ್ಕಿದ್ದಂತೆ ಲಕ್ಷ್ಮಣ ಬಂದು ಹನುಮಂತನಿಗೆ ಹೇಳಿದ: 'ಮಹಾವೀರ, ಬಹು ದೂರದ ಒಂದು ದ್ವೀಪದಲ್ಲಿ ಓರ್ವ ತಪಸ್ವಿ ವಾಸವಾಗಿದ್ದಾನೆ. ಆತನ ಬಳಿಗೆ ಹೋಗಿ ಶ್ರೀರಾಮಚಂದ್ರ ಆತನನ್ನು ಉತ್ಸವಕ್ಕಾಗಿ ಆಹ್ವಾನಿಸಿದ್ದಾನೆಂದು ಹೇಳಿ ಬಾ." ತಕ್ಷಣ ಹನುಮಂತ ಹೊರಟುಬಿಟ್ಟ. ಆ ದ್ವೀಪಕ್ಕೆ ಹೋಗಿ ನೋಡುತ್ತಾನೆ! ಜ್ಯೋತಿರ್ಮಯ ಪುರುಷನೊಬ್ಬ ಧ್ಯಾನ ಮಾಡುತ್ತ ಕುಳಿತಿದ್ದಾನೆ. ಆದರೆ ಆತನ ಮುಖ ಮಾತ್ರ ಹಂದಿಯ ಮುಖವಾಗಿತ್ತು. ಹನುಮಂತ ಆತನಿಗೆ ಶ್ರೀರಾಮಚಂದ್ರನ ನಿಮಂತ್ರಣವನ್ನು ನಿವೇದಿಸಿ "ನೀವು ಬೇಕಾದರೆ ನನ್ನ ಭುಜದ ಮೇಲೆ ಕುಳಿತುಕೊಳ್ಳಿರಿ. ಈ ಕ್ಷಣದಲ್ಲಿಯೇ ನಿಮ್ಮನ್ನು ಅಯೋಧ್ಯೆಗೆ ಕರೆದುಕೊಂಡು ಹೋಗುವೆ" ಎಂದ. ಆ ತಪಸ್ವಿ ಶ್ರೀರಾಮಚಂದ್ರನ ಆಮಂತ್ರಣವನ್ನು ಕೇಳಿ ಪುಲಕಿತನಾದ ಹಾಗೂ ಹಲವು ತಾವರೆ ಹೂಗಳನ್ನು ತಂದು ಹನುಮಂತನ ಕೈಗೆ ಕೊಟ್ಟು "ಇದನ್ನು ಪ್ರಭು ಶ್ರೀರಾಮನ ಚರಣಾರವಿಂದಗಳಿಗೆ ಸಮರ್ಪಿಸಿರಿ. ನಾನು ನಿಮ್ಮ ಭುಜವನ್ನು ಸ್ಪರ್ಶಿಸಲಾರೆ. ನೀವು ಮುಂದೆ ನಡೆಯಿರಿ. ನಾನು ಈಗಲೇ ಬಂದುಬಿಡುವೆ" ಎಂದನು.

ಹನುಮಂತನು ಮನಸ್ಸಿನಲ್ಲಿ ಈ ರೀತಿ ಆಲೋಚಿಸಿದ: 'ನಾನು ಶ್ರೀರಾಮನ ದರ್ಶನವನ್ನು ಜೀವಿಗಳಿಗೆ

ಉಂಟುಮಾಡದಿದ್ದರೆ, ಅವರೆ ಸ್ವತಃ ಹೇಗೆ ತಾನೇ ಶ್ರೀರಾಮನ ಪಾದಗಳ ದರ್ಶನ ಮಾಡಬಲ್ಲರು?" ಹೀಗೆ ಯೋಚಿಸುತ್ತ, ಆ ಮಹಾತ್ಮನಾದ ತಪಸ್ವಿ ಯನ್ನು ಪ್ರಶ್ನಿಸಿದ: "ಮಹಾತ್ಮರೇ, ನಿಮ್ಮ ಈ ಜ್ಯೋತಿರ್ಮಯ ಶರೀರಕ್ಕೆ ಸುವರ್ಣ ವರ್ಣದೊಂದಿಗೆ ಹಂದಿಯ ಮುಖ ಹೇಗೆ ಉಂಟಾಯಿತು?" ಆಗ ಆ ತಪಸ್ವಿ ಹೇಳಿದ, "ಹನುಮ, ನಾನು ಪೂರ್ವ ಜನ್ಮದಲ್ಲಿ ಬಹಳ ದಾನ ಮಾಡಿದ ಫಲದಿಂದ ನನಗೆ ಹಿಂದಿನ ಜನ್ಮಗಳ ಘಟನೆಗಳನ್ನು ತಿಳಿಯುವ ಶಕ್ತಿ ಉಂಟಾಗಿದೆ, ಹಾಗೂ ಈಗಿರುವ ಜ್ಯೋತಿರ್ಮಯ ಶರೀರ ಉಂಟಾಗಿದೆ. ಆದರೆ ದಾನ ನೀಡುತ್ತಿದ್ದ ಕಾಲದಲ್ಲಿ ನಾನು ಅನೇಕ ಜನರನ್ನು ಕೆಟ್ಟ ಮಾತುಗಳಿಂದ ನೋಯಿಸುತ್ತಿದ್ದೆ. ಆದ್ದರಿಂದ ಈ ಹಂದಿಯ ಮುಖ ಉಂಟಾಯಿತು." ಹನುಮಂತ ಆಶ್ಚರ್ಯಚಕಿತನಾಗಿ, ಲಕ್ಷ್ಮಣ ತನ್ನನ್ನು ತಿದ್ದುವುದಕ್ಕಾಗಿಯೇ ಇಲ್ಲಿಗೆ ಕಳುಹಿಸಿದ ಎಂದು ಅರ್ಥಮಾಡಿಕೊಂಡ. ಆ ತಪಸ್ವಿಗೆ ನಮಸ್ಕಾರ ಮಾಡಿ ಹನುಮಂತ ಹೇಳಿದ, "ಇನ್ನು ತಡ ಮಾಡದೆ ಹೊರಡೋಣ. ತಾವು ಬರಬಹುದು". ಆಗ ಆ ತಪಸ್ವಿ "ನೀವು ಹೊರಟ ತಕ್ಷಣವೇ ನಾನೂ ಹೊರಡುವೆ" ಎಂದ. ಹನುಮಂತ ಸಂದಿಗ್ಧಚಿತ್ತದಿಂದ ಹೊರಟುಬಂದು ಪ್ರಭು ಶ್ರೀರಾಮನಲ್ಲಿ ಎಲ್ಲವನ್ನೂ ನಿವೇದಿಸಿ, ಆತನ ಪಾದಗಳಲ್ಲಿ ಆ ತಪಸ್ವಿಯಿತ್ತ ಹೂಗಳನ್ನೂ ಇಟ್ಟ. ಅನಂತರ ಪ್ರಭು ಶ್ರೀರಾಮನನ್ನು ಕೇಳಿದ, 'ಪ್ರಭು, ನೀವು ನನಗೊಂದು ವರ ದಯಪಾಲಿಸಿರುವಿರಿ. ಅದರಂತೆ ನನ್ನ ಸಹಾಯವಿಲ್ಲದೆ ಯಾರೂ ತಾವಾಗಿಯೇ ತಮ್ಮ ಪಾದಪದ್ಮಗಳ ದರ್ಶನ ಮಾಡಲು ಸಾಧ್ಯವಿಲ್ಲ. ಹಾಗಿದ್ದಲ್ಲಿ ಆ ಮಹಾತ್ಮ ತಮ್ಮ ಬಳಿಗೆ ತಾನೇ ಹೇಗೆ ಬರುತ್ತಾನೆ?" ಶ್ರೀರಾಮಚಂದ್ರ ನಕ್ಕು ಹೇಳಿದ: "ಮಾರುತಿ, ನೀನು ಪ್ರಸನ್ನನಾದ್ದರಿಂದಲೇ ಈ ಯೋಗಿ ಮಹಾತ್ಮನು ಈ ಹೂವುಗಳ ಮಧ್ಯೆ ತನ್ನ ನಿಜ ಶರೀರವನ್ನು ಯೋಗಬಲದಿಂದ ಇಟ್ಟಿದ್ದಾನೆ. ನೀನೇ ಆ ಹೂವುಗಳನ್ನು ತಂದಿರುವುದರಿಂದ ಆತ ನಿನ್ನೊಡನೆಯೇ ಇಲ್ಲಿ ಉಪಸ್ಥಿತ ನಾಗಿದ್ದಾನೆ, ನೋಡು." ಆಗ ತನ್ನೆದುರು ಆ ಹೂವುಗಳ ಮಧ್ಯದಿಂದ ಹೊರಬಂದ ಯೋಗಿಯನ್ನು ಕಂಡು ಹನು ಮಂತ ಬೆರಗಾದ. ✪

## ಚಾಲಾಕಿ ಶಿಷ್ಯ

ಒಂದು ಮಠದ ಮಹಂತರ ಅಪಾರ ಐಶ್ವರ್ಯವನ್ನು ಕಂಡು ಒಬ್ಬ ವ್ಯಕ್ತಿಗೆ ತಾನೂ ಮಹಂತನಾಗಬೇಕೆಂಬ ಆಸೆ ಯಾಯಿತು. ಆದರೆ ಮೊದಲು ಶಿಷ್ಯನಾಗದೆ ಮಹಂತನಾಗಲು ಸಾಧ್ಯವೇ? ಆದ್ದರಿಂದ ಆ ವ್ಯಕ್ತಿ ಮಹಂತರ ಬಳಿಗೆ ಬಂದು ಹೇಳಿದ, "ಸ್ವಾಮಿ, ದಯವಿಟ್ಟು ನನ್ನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿರಿ." ಮಹಂತರು ಅವನಿಗೆ ಹೇಳಿದರು, "ನೋಡು, ಶಿಷ್ಯ ನಾಗುವುದೆಂದರೆ ಭಾರೀ ಕಷ್ಟದ ಕೆಲಸ. ಗುರು ಹೇಳಿದ್ದನ್ನು ಶಿಷ್ಯ ಪರಿಪಾಲನೆ ಮಾಡದಿದ್ದರೆ ಅದು ಶಿಷ್ಯನಿಗೆ ತುಂಬ ಕೆಟ್ಟದ್ದು ಮತ್ತು ಅಮಂಗಳಕರ." ಆಗ ಆ ವ್ಯಕ್ತಿ ಕೇಳಿದ, "ಮಹಾಶಯರೆ, ಶಿಷ್ಯ



ಯಾವ ರೀತಿಯ ಕೆಲಸಗಳನ್ನು ಮಾಡಬೇಕಾಗುತ್ತದೆ?" ಅದಕ್ಕೆ ಗುರು ಹೇಳಿದ, "ನೋಡಪ್ಪಾ, ಒಂದು ವೇಳೆ ರಾತ್ರಿಯ ಸಮಯದಲ್ಲಿ ೨೦ ಮೈಲಿ ನಡೆದು ಹೋಗಿ ಮತ್ತೆ ೨೦ ಮೈಲಿ ನಡೆದು ಬಾ ಎಂದರೆ, ಆ ರಸ್ತೆ ದುರ್ಗಮ ವಾಗಿದ್ದು ಹಿಂಸ್ರ ಜಂತುಗಳಿಂದ ತುಂಬಿದ್ದರೂ, ಗುರುವಾಕ್ಯವನ್ನು ಪರಿಪಾಲನೆ ಮಾಡಲೇಬೇಕು. ಇಲ್ಲದಿದ್ದಲ್ಲಿ ಶಿಷ್ಯ ಪಾತಕಿಯಾಗು ತ್ತಾನೆ. ಆದ್ದರಿಂದ ಶಿಷ್ಯನಾಗು ವುದು ಬಲು ಕಠಿಣ" ಎಂದ. ಆಗ ಆ ವ್ಯಕ್ತಿ ಥಟ್ಟನೆ ಹೇಳಿದ, "ಮಹಾಶಯರೆ, ಹಾಗಾದರೆ ನನ್ನನ್ನು ಗುರುವನ್ನಾಗಿಯೇ ಮಾಡಿಬಿಡಿ." ✪